'ಏಕತಾರಿ' ಎಂಬ ಜನಪದ ಅನುಭಾವದ ರೂಪಕವೇ ಇಲ್ಲಿನ ಅನೇಕ ಕತೆಗಳ ವಿಸ್ತರಣೆಯ ರೂಪಕವೂ ಆಗಿದೆ. ತಾತ್ವಿಕ ದೃಷ್ಟಿಯಿಂದಲೂ ಇವರ ಕತೆಗಳನ್ನು ಒಂದು ದಾರಿಗೆ ಎಳೆಯಲು ಸಾಧ್ಯತೆಗಳಿವೆ. ಮನುಷ್ಯನಿಗೆ ಅನುಭಾವದ ಆಯಾಮಗಳು ಗೀಳಾದಾಗ ಬದುಕು ದಿಕ್ಕು ತಪ್ಪುತ್ತದೆ. ಆದರೆ, ಅದು ಹುಡುಕಾಟದ ಹಾದಿಯಲ್ಲಿದ್ದಾಗ ಬೇರೆ ರೂಪಗಳನ್ನು ಧರಿಸಬಹುದು. ರಂಗಪ್ಪ ಹುಡುಕಾಟದಲ್ಲಿದ್ದ. ಚಂದ್ರಪ್ಪ ಆರಂಭದಲ್ಲಿ ಅದನ್ನೊಂದು ಗೀಳು ಎಂದು ಭಾವಿಸಿದ್ದರಿಂದ ವಿಚಿತ್ರವೇದನೆಯನ್ನು ಅನುಭವಿಸುತ್ತಾನೆ. ಈ ಬಗೆಯ ಕತೆಗಳ ಸಾಗುವಿಕೆಯ ಆಶಯ ಇರುವುದೇ ಬದುಕಿನ 'ಅಸಂಗತ'ದ ಕಡೆಯಿಂದ 'ಸಂಗತ'ದ ಕಡೆಗೆ ಚಲಿಸುವಲ್ಲಿ.

ಇದೇ ಹಾದಿಯನ್ನು 'ಹೊಸ್ತಿಲೊಳಗಣ ಹುತ್ತ' ಕತೆ ಹಿಡಿಯುತ್ತದೆ. ಗ್ರಾಮೀಣ ಪ್ರದೇಶಗಳ ರಾಜಕೀಯ, ಸ್ವಾರ್ಥ, ಅಸೂಯೆಗಳು ಮೇಲುಗೈ ಪಡೆದರೂ ಗಿರಿಯಪ್ಪ, ಪರಪ್ಪನಿಂದ ಇವೆಲ್ಲವನ್ನೂ ದಾಟುವುದು ಅಂತರಂಗದ ತಿಳಿವಳಿಕೆಗಳಿಂದಲೇ. ವ್ಯವಸಾಯದ ಚಿತ್ರಗಳ ಮೂಲಕ ಸದಾ ನಡೆಯುವ ಸಂಘರ್ಷಗಳನ್ನು ಹಿಡಿದಿರುವ ಈ ಕತೆ ಭಿನ್ನ ಹಾದಿ ಹಿಡಿದಿದೆಯಾದರೂ ಮಾತು–ಕತೆಗಳೆ ಅಧಿಕಗೊಂಡು ಕಥನದ ಲಯಕ್ಕೆ ಕೊಂಚ ತೊಡಕು ಉಂಟಾಗಿದೆ. ಜನಪದ ನಂಬಿಕೆ ಮತ್ತು ಆಧುನಿಕ ವಿದ್ಯಾಭ್ಯಾಸದಿಂದ ಉಂಟಾಗಿರುವ ನಂಬಿಕೆಗಳ ನಡುವಣ ದ್ವಂದ್ವಗಳನ್ನು ಎದುರುಬದುರಾಗಿಸುವ ಕತೆ 'ಸುಖದ ನಾದ ಹೊರಡಿಸುವ ಕೊಳಲು'. ಮಾದರ ಚನ್ನಯ್ಯನ ವಂಶದವಳಾದ ರೆಬಕವ್ವ ತನ್ನ ದೇವರಾದ ಅಯರ್ಾಣಸಿದ್ಧನಿಗೆ ರೆಂಪಿಗೆಯಿಂದ ಮಾಡಿದ ಚಮ್ಮಾವುಗೆಯನ್ನು ಚಾಜಕೊಡುವ ಹಳೆಯ ಸಂಪ್ರದಾಯ ಇಟ್ಟುಕೊಂಡಿದ್ದಾಳೆ. ಇದು ಜನಪದ ಲೋಕದೃಷ್ಟಿ. ಪೇಟೆಯಲ್ಲಿ ಓದಿದ ಮಗ ಅರುಣಕುಮಾರ ಇದನ್ನು ಮುರಿದು ಮಿನುಗುವ ಹೊಸ ಚಪ್ಪಲಿಯನ್ನು ತಂದಿದ್ದಾನೆ. ಇದು ಬದಲಾಗುತ್ತಿರುವ ಅಥವಾ ಬದಲುಮಾಡುತ್ತಿರುವ ನಂಬಿಕೆಯ ಸ್ವರೂಪ. ಇದರಲ್ಲಿ ವ್ಯಾವಹಾರಿಕ ಮನಸ್ಸು ಕೂಡ ಕೆಲಸ ಮಾಡಿದೆ. ಮೇಲುನೋಟಕ್ಕೆ ದಲಿತ ಕಥಾಲೋಕದ ವಸ್ತುವಿನ್ಯಾಸ ನೆನಪಾದರೂ ಅದನ್ನು ಮುರಿದುಕಟ್ಟುವ ಯತ್ನಗಳು ಇಲ್ಲಿವೆ. ಕತೆ ಇಷ್ಟಕ್ಕೇ ನಿಲ್ಲದೆ ಅದರಲ್ಲಿ ರೆಬಕವ್ವನ ಇಡೀ ನಂಬಿಕೆಗಳ ಲೋಕವು ಭಗ್ನವಾಗುವ ಸಂಗತಿಗಳು ನಡೆದುಹೋಗುತ್ತವೆ. ಉತ್ತರ ಕರ್ನಾಟಕ ಭಾಗದ ಸಿದ್ಧ ಪರಂಪರೆಯು ಇಂದಿಗೂ ನಡೆಸಿಕೊಂಡು ಬಂದಿರುವ ಅನೇಕ ಸಂಪ್ರದಾಯಗಳಲ್ಲಿ 'ಸೀತಾಳ ಬಾವಿಗೆ' ವಿಶಿಷ್ಟ ಸ್ಥಾನವಿದೆ. ಸೀತಾಳ ನೀರು ಅಂದರೆ ಸಿದ್ಧಪರಂಪರೆಯಲ್ಲಿ ಪವಿತ್ರನೀರು. ಈ ಕತೆಯಲ್ಲಿ ಅದು ಕಾರಣಾಂತರಗಳಿಂದ 'ಕಣ್ಣೀರ ಬಾವಿ'ಯಾಗಿದೆ. ಅದನ್ನು ತೋಡಿಸುವುದಕ್ಕೆ ಮಗ ಹಟಕ್ಕೆ ಬಿದ್ದಾಗ ತಾಯಿ ಸಮೇತ ಊರಿನ ಜನ ವಿರೋಧಿಸುವ ನೆಲೆಯೂ ಕೂಡ ಕತೆಯ ಮುಖ್ಯ ಘಟನೆ. ಏಕಕಾಲಕ್ಕೆ ಜನಪದ ಕತೆಯ ಧಾಟಿ ಮತ್ತು ಅದರ ಮುಖೇನ ಬದಲುಗೊಂಡ ನಂಬಿಕೆಗಳನ್ನು ಈ ಕತೆ ಹೆಣೆಯುತ್ತದೆ. ಇಂತಹ ಕಡೆ ಜನಪದ ಕತೆಯ ಮಾದರಿಗಳನ್ನು ಮುರಿದು ಕಟ್ಟುವುದು ಸುಲಭವಲ್ಲ.

ಕಟ್ಟಿಯವರಿಗೆ ಕನ್ನಡ ಕಥಾಪರಂಪರೆಯ ಪರಿಚಯ, ಜನಪದಕಥನ ಮಾದರಿಗಳು, ವಿದೇಶಿ ಕತೆಗಳ ರಚನೆಗಳು ಪರಿಚಿತ. ಅವುಗಳಿಂದ ಮುಂದೆ ತಮ್ಮದೇ ದಾರಿಗಳನ್ನು ಕಂಡುಕೊಳ್ಳಲು ಸಾಧ್ಯವಾಗಿದೆ. ಮನುಷ್ಯ ಬದುಕನ್ನು ವಿಶಾಲನೆಲೆಯಲ್ಲಿ ನೋಡುವುದು ಕಟ್ಟಿಯವರಿಗೆ ಮುಂದೆ ಸಾಧ್ಯವಾಗುವ ಎಲ್ಲ ಲಕ್ಷಣಗಳೂ ಈ ಕತೆಗಳಲ್ಲಿ ಕಾಣಿಸುತ್ತವೆ. ಗಟ್ಟಿಕತೆಗಳು ಮರೆಯಾಗುವುದಕ್ಕೆ ಒಪ್ಪಲಾರವು ಎಂಬುದಕ್ಕೆ 'ಏಕತಾರಿ' ನಿದರ್ಶನ. ಇದಕ್ಕೆ ತಕ್ಕಂತೆ ಕತೆಗಾರ ಎಸ್.ಎಫ್. ಯೋಗಪ್ಪನವರ ಅವರ ದೀರ್ಘ ಪ್ರಸ್ತಾವನೆ ಕತೆಗಳಿಗೆ ನ್ಯಾಯ ಒದಗಿಸಿದೆ.